ಗ್ರಾಮದ ಕೆರೆಗಳ ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ.

ಮಾನ್ಯ ವಿಧಾನ ಸದಸ್ಯರಾದ ಶ್ರೀ ಸಿಂಧೂರ ಜೆ. ರಾಜಶೇಖರ (ಶಿಗ್ಗಾಂವ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1111ಕ್ಕೆ ಅನುಬಂಧ

ಕ್ರ ಸಂ.	ಕಾಮಗಾರಿಯ ಹೆಸರು	ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	ಗುತ್ತಿಗೆ ಮೊತ್ತ	ಟೆಂಡರ್ ಪ್ರೀಮಿಯಂ	ಷರಾ
1	ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಮಾದಾಪೂರ ಕೆರೆ ಸುಧಾರಣೆ ಕಾಮಗಾರಿ	ಶ್ರೀ ಎಸ್.ಜಿ. ಪಾಟೀಲ್‌ಕುಲಕರ್ಣಿ ಗರಗ	19.57	20.73	5.90% ಹೆಚ್ಚು	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.
2	ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ತೆವರಮೆಳ್ಳಿ ಹಳ್ಳಿ ಕೆರೆ ಹಾಗೂ ಕಾಲುವೆ ಸುಧಾರಣೆ ಮತ್ತು ದುರಸ್ತಿ ಕಾಮಗಾರಿ	ಶ್ರೀ ಕೆ. ಬಸವರಾಜ್, ಹುಬ್ಬಳ್ಳಿ	14.77	15.62	5.79% ಹೆಚ್ಚು	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.
3	ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಯಲವಿಗಿ ಕೆರೆ ಹಾಗೂ ಕಾಲುವೆ ಸುಧಾರಣೆ ಕಾಮಗಾರಿ	ಮೆ: ಕರ್ನಾಟಕ ಸಿಮೆಂಟ್ ಪೈಪ್ ಫ್ಯಾಕ್ಟರಿ, ಹುಬ್ಬಳ್ಳಿ	24.61	26.03	5.89% ಹೆಚ್ಚು	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.

850(1112) ಶ್ರೀ ಸಿಂಧೂರ ಜೆ. ರಾಜಶೇಖರ (ಶಿಗ್ಗಾಂವ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರ ಕೋಟೆ ಆವರಣದಲ್ಲಿ ನವಿಲು ಧಾಮ ನಿರ್ಮಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಕಲಂ. 36 (ಎ) ಅಡಿಯಲ್ಲಿ ಬಂಕಾಪುರ ಪಟ್ಟಣದ 139.10 ಎಕರೆ ಕೋಟೆ ಪ್ರದೇಶವನ್ನು ಸಂರಕ್ಷಿತ ಮೀಸಲು ಪ್ರದೇಶ ಎಂದು ಘೋಷಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಇ) ಈವರೆಗೆ ಕೇವಲ ನಾಮ ಫಲಕ ಮತ್ತು ಕುಡಿಯುವ ನೀರಿಗೆ ರೂ. 55 ಸಾವಿರ ಅನುದಾನ ಮಾತ್ರ ಬಿಡುಗಡೆಗೊಳಿಸಿ ಇನ್ನಿತರೇ ಯಾವುದೇ ಅಭಿವೃದ್ಧಿ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಆದಷ್ಟು ತೀವ್ರಗತಿಯಲ್ಲಿ ಪೂರ್ಣ ಪ್ರಮಾಣದ ನವಿಲು ಧಾಮ ನಿರ್ಮಿಸಲು ಸರ್ಕಾರ ಅನುದಾನ ಬಿಡುಗಡೆ ಗೊಳಿಸಲು ಕ್ರಮ ಕೈಗೊಳ್ಳವುದು ಯಾವಾಗ?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 237 ಎಫ್‌ಡಿಬ್ಲ್ಯೂಎಲ್ 2005 ದಿನಾಂಕ: 09–06–2006ರಲ್ಲಿ ಈ ಪ್ರದೇಶವನ್ನು ಬಂಕಾಪುರ ನವಿಲು ಸಂರಕ್ಷಣಾ ಮೀಸಲು ಎಂದು ಘೋಷಿಸಲಾಗಿದೆ.

ಇ) ಬಂಕಾಪುರ ನವಿಲು ಸಂರಕ್ಷಣಾ ಪ್ರದೇಶದ ನಿರ್ವಹಣೆ/ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳಿಗಾಗಿ ರೂ. 18 ಲಕ್ಷಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯ ಅಭಿವೃದ್ಧಿ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ದಿನಾಂಕ: 08–01–2007ರಲ್ಲಿ ಕೋರಲಾಗಿರುತ್ತದೆ. ಅನುದಾನ ನಿರೀಕ್ಷಿಸಿದೆ.

ಈ) ಅನುದಾನ ನಿರೀಕ್ಷಿಸಲಾಗಿದೆ.

851(1113) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಸುವರ್ಣ ಕಾಯಕ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವ ಜನರಿಗೆ ಅನುಕೂಲ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಶಿಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಸುವರ್ಣ ಕಾಯಕ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವ ಜನರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶಿವಾನಂದ್ ಎಸ್. ನ್ಯಾಯ್ಕ (ಮಾನ್ಯ ಕೈಗಾರಿಕಾ ಸಚಿವರು)